**<u>ದಿನಾಂಕಃ 15.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ಪ್ರತಿವಾದಿಗಳ ಪರ ಶ್ರೀ ಹೆಚ್.ಎಸ್.ಹೆಚ್. ವಕೀಲರಿಂದಃ</u>**

1) ವಾದಿ ನನ್ನ ಅಕ್ಕ. 1ನೇ ಪ್ರತಿವಾದಿ ನನ್ನ ದೊಡ್ಡಪ್ಪನ ಮಗ. 1ನೇ ಪ್ರತಿವಾದಿಯ ಜೊತೆ ಕಳೆದ 2-3 ವರ್ಷಗಳಿಂದ ನಾನು ಮಾತು ಆಡುತ್ತಿಲ್ಲ. ನನಗೂ ಮತ್ತು ಆತನಿಗೂ ಜಮೀನಿನ ವಿಚಾರದಲ್ಲಿ ಮಾತುಕತೆ ಆಗಿತ್ತು. 1ನೇ ಪ್ರತಿವಾದಿಯು ಜಮೀನನ್ನು ಮಾರಾಟ ಮಾಡುವುದಾಗಿ ನನಗೆ ಮತ್ತು ನನ್ನ ತಂದೆಗೆ ಹೇಳಿದ್ದರು. ದಾವಾ ಸ್ವತ್ತಿನಲ್ಲಿ ನನ್ನ ಮತ್ತು 1ನೇ ಪ್ರತಿವಾದಿಯ ಕುಟುಂಬದ ನಡುವೆ ಇದುವರೆವಿಗೂ ಯಾವುದೇ ರೀತಿ ಭಾಗ ಆಗಿಲ್ಲ ಮತ್ತು ಅದರಲ್ಲಿ ನನಗೆ ಹಕ್ಕು ಇರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿಯ ಮಗಳ ಮದುವೆಗೆ ಹಣದ ಅವಶ್ಯಕತೆ ಇರುವ ಕಾರಣ ವಾದಿಯ ಮೂಲಕ ನಾನು ಆತನಿಗೆ ಹಣವನ್ನು ಕೊಡಿಸಿದ್ದೆನು. ಆ ವೇಳೆಗೆ ನಾನು ಮತ್ತು ನನ್ನ ತಂದೆ ಕೂಡಿ 1ನೇ ಪ್ರತಿವಾದಿಯ ಮೂಲಕ ನಿಪಿ.1 ರ ಕರಾರು ಪತ್ರವನ್ನು ವಾದಿಗೆ ಬರೆಸಿಕೊಟ್ಟಿದ್ದೆವು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಈಗ ವಿದ್ಯುತ್‌ಚ್ಛಕ್ತಿ ಲೈನ್ ಹೋಗಿದೆ ಎಂದರೆ ಸರಿ. ಆ ರೀತಿ ವಿದ್ಯುತ್‌ಚ್ಛಕ್ತಿ ಲೈನ್ ಹಾಕಿದ ಸಂಬಂಧ ಪರಿಹಾರವನ್ನು ನೀಡಿರುತ್ತಾರೆ ಎಂದರೆ ಸರಿ. ವಾದಿಯು ಅಲ್ಲಿ ವಿದ್ಯುತ್‌ಚ್ಛಕ್ತಿ ಲೈನ್ ಹಾದು ಹೋಗಿರುವ ಸಂಬಂಧ ಪರಿಹಾರವನ್ನು ಪಡೆದಿರುತ್ತಾರೆ. ಆ ರೀತಿ ಬಂದ ಪರಿಹಾರದ ಹಣವನ್ನು ವಾದಿಗೆ ಪಡೆದುಕೊಳ್ಳುವಂತೆ 1ನೇ ಪ್ರತಿವಾದಿ ಪುಟ್ಟಸ್ವಾಮಿ ರವರು ತಿಳಿಸಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ಪರಿಹಾರವಾಗಿ ಬಂದ 1 ಲಕ್ಷ ಹಣವನ್ನು ಚೆಕ್ ಮುಖಾಂತರ ವಾದಿಗೆ ನೇರವಾಗಿ ಪಡೆದುಕೊಳ್ಳುವಂತೆ ಹೇಳಿ ಉಳಿದ 50 ಸಾವಿರ ಹಣವನ್ನು ತಾನು ತದನಂತರ ಹಿಂತಿರುವುಸುದಾಗಿ ತಿಳಿಸಿದ್ದರು ಎಂಬ ವಿಚಾರ ನನಗೆ ಗೊತ್ತಿಲ್ಲ. ಸದರಿ ಸಂಗತಿ ನನಗೆ ತಿಳಿದಿದ್ದರೂ ಸಹ ವಾದಿ ನನ್ನ ಸಹೋದರಿ ಇರುವ ಕಾರಣ ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2) 1ನೇ ಪ್ರತಿವಾದಿಯು ಈಗಲೂ ಸಹ ತಾನು ಉಳಿಕೆ 50 ಸಾವಿರ ಹಣವನ್ನು ಹಿಂತಿರುಗಿಸುವುದಾಗಿ ನನ್ನ ಮೂಲಕ ವಾದಿಗೆ ತಿಳಿಸಿದ್ದರೂ ಸಹ ಆಕೆ ಹಣ ಪಡೆಯ ಒಪ್ಪಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ 1ನೇ ಪ್ರತಿವಾದಿಯೇ ದಾವಾ ಸ್ವತ್ತನ್ನು ಉಳುಮೆ

ಮಾಡುತ್ತಿದ್ದಾರೆ ಎಂದರೆ ಸರಿ. ಎಲ್ಲಾ ವಿಚಾರಗಳ ಬಗ್ಗೆ ತಿಳಿದಿದ್ದರೂ ಸಹಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ**.**

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**